


ನೋಡಿ ಬೇಸರಿಸಿಕೊಂಡಿತು. ಯಾರಾದರೂ ಒಳನುಗ್ಗಿ ಬಂದರೆ ಅವರಿಗೆ ಮನೆಯಲ್ಲಿರುವ ಮಾಂಸ ಕಂಡುಬಿಟ್ಟರೆ ಬಿಸಾಕಲೇ ಬೇಕಾಗುತ್ತದೆಂಬ ಅಚಾತುರ್ಯ ನೆನೆದು ಬೆಚ್ಚಾರಿಸಿಕೊಂಡ. ಆಡರ ಬಾಯಿಗೆ ಸಿಕ್ಕಿ 'ದುಃಖದವರಿಗೆ ದುಃಖ ಸುಖದವರಿಗೆ ಸುಖ' ಎಂದು ಮೂದಲಿಕೆಗೊಳಗಾಗುವುದನ್ನ ನೆನೆದು ಇನ್ನು ಸುಸ್ತಾದ.

ಯಾರಾದರೂ ಹತ್ತಿರದವರು ಸತ್ತಾಗ ಮಾಡಿರೊ ಅಡುಗೇನೆ ತಿನ್ನಲಾರದೆ ಬಿಟ್ಟು ಉಪಾಸ ಇರ ಜನರೆದುರು ನಾನು ಮುಂದುವರೆದು ತಿನ್ನಕೆ ಬೇಯಿಸ್ಕೆಂಡು ಕೂತ್ರೆ ಜನ ಏನಂದಾರು ಎಂದು ಯೋಚಿಸಿದ. ಅದೂ ಅಲ್ಲದೆ, ಸತ್ತಿರುವುದು ದೂರದ ಯಾರೋ ಅಲ್ಲ, ಸ್ವಂತ ದೊಡವ್ವ. ಹೀಗಿರುವಾಗ, ಇಂದು ತಂದಿರುವ ಮಾಂಸ ವೇಸ್ಟೆ ಸರಿ ಎಂದುಕೊಂಡು ಮಕ ಸಪ್ಪುಗೆ ಮಾಡಿಕೊಂಡು ನಿಂತೆ ಬಿಟ್ಟ. ಆಚೆಯಿಂದ ಯಾರೋ ಕರೆದಂತಾಗಿ ಅಷ್ಟಿಷ್ಟು ಕಾಣುತ್ತಿದ್ದ ಮಾಂಸದ ಸುಲಾಕುಗಳನ್ನೂ ಕಾಣದಂತೆ ಹಿಂದಕ್ಕೆ ತಳ್ಳಿ ಆಚೆ ಬಂದ.

ಆಚೆ ಬಂದರೆ ತಿಮ್ಮನಿಗೆ ಮೈತುಂಬ ಕೆಲಸ. ಅವ್ರಿಗೆ ಹೇಳಿ ಕಳ್ಸದು, ಇವ್ರಿಗೆ ಹೇಳಿ ಕಳ್ಸದು, ಬಿದ್ರು ಕಡಿಯಕೆ ಕಳ್ಸದು, ಗುಂಡಿ ತೋಡರ್ಗೆ ಜಾಗ ತೋರ್ಸದು, ತಮ್ಟೆರ್ಗೆ ಹೇಳಿ ಕಳ್ಸದು ಇತ್ಯಾದಿ ಮಾಡಿ ಸಾಕಾಗಿ ಮಧ್ಯಾಹ್ನ ಉರಿ ಬಿಸ್ಲಲ್ಲಿ ಬಂದು ಮನೆ ಮುಂದಿದ್ದ ತೆಂಗಿನ ಮರ್ದಡಿ ಕೂತ. ಅಲ್ಲಿ ಕೂತ್ರು ನೆಂಟ್ರು ಇಷ್ಟ್ರು ಬಂದರು ದೊಡಪ್ಪುನ್ನ ಇನ್ನ ತೊಳಿಯರ್ರ್ಯಾರು, ಬಾಚರ್ರ್ಯಾರು ಎಂದು ಕೆದಕುತ್ತ ಮಾತಿಗೆಳೆದೇ ಬಿಡುತ್ತಿದ್ದರು. ಜನಗಳ ಜೊತೆ ಕೆಲಸಗಳ ನಡುವೆ ಇದ್ದಷ್ಟು ಕಾಲ ಒಳಗಿರುವ ಅಪರೂಪದ ಪದಾರ್ಥ ನೆನಪಿಗೆ ಬಾರದೆ ಹೋದದ್ದು ಸುಳ್ಳಲ್ಲ. ಹೀಗೆ ಶೂನ್ಯದಲ್ಲಿ ಕೂತಿರುವಾಗ ಇದ್ದಕ್ಕಿದ್ದಂತೆ ಫಳಾರ್ ಎಂದು ಒಳಗಿನ ಪದಾರ್ಥ ಇನ್ನೊಮ್ಮೆ ಜಪ್ತಿಗೆ ಬಂದಿತು.

ಇವತ್ತು ಮಲ್ಲಿ ಅದ್ಯಾವ ಟೈಮಿಗೆ ತಂದು ಕೊಟ್ಟೋದ್ನೊ, ಅವ್ನು ತಂದುಕೊಟ್ಟಿರ ಗಳಿಗೆನೇ ಸರಿ ಇಲ್ಲ ಎನಿಸಿ ಪುಣ್ಯಕ್ಕೆ ಮಲ್ಲಿ ತಂದು ಕೊಟ್ಟೋದದ್ದನ್ನ ಯಾರೂ ನೋಡಿದಂತಿಲ್ಲ; ನೋಡಿದ್ದೆ ಆದರೆ ಖಂಡಿತ ಬಿಸಾಕಬೇಕಾಗಿತ್ತು ಎಂದುಕೊಂಡು ಬಾಯಾರಿ ನೀರು ಕುಡಿಯುವವನಂತೆ ಹೋಗಿ ಕೋಣೆಯೊಳಗಿದ್ದ ಪದಾರ್ಥದ ಮುಂದೋಗಿ ನಿಂತ.

ಶಂಕ್ರಿ ಅದ್ಯಾವಾಗ್ಲೊ ಬಂದು ಈರುಳ್ಳಿ ಬೆಳ್ಳುಳ್ಳಿ ಎತ್ತಿಕ್ಕಿ ಹೋಗಿದ್ಲು. ಸೂರ್ಯ ನೆತ್ತಿ ಬಿಟ್ಟಿದ್ದರು ಮಾಂಸ ಬೆಳಗ್ಗೆ ಹೆಂಗೆ ಇತ್ತೊ ಅಂಗೇ ಒಂಚೂರು ಮುಕ್ಕಾಗ್ದಂಗಿತ್ತು. ಅದನ್ನ ನೋಡಿ ತಿಮ್ಮನ ಆಸೆ ಮತ್ತೆ ಚಿಗುರಿ, ಹೋಗ್ಲಿ ಈ ಅಪರೂಪದ ಪದಾರ್ಥನ ಬಿಸಾಕದು ಬೇಡ, ಅದನ್ನ ಇದೆಂಥದ ಫ್ರಿಡ್ಜು ಅಂತರಲ್ಲ ಅದರೊಳಿಕೆ ಇಕ್ಕಿರೆ ಯಂಗೆ ಎಂದು ಯೋಚಿಸಿದ. ಆದ್ರೆ ಅದು ಈ ಊರಲ್ಲಿ ಇರೋದು ಒಬ್ನೆ ನೌಕರ ಭೀಮಣ್ಣನ ಮನೆಯಲ್ಲಿ. ಆತ ಮೊದ್ಲೆ ಪೂಜೆ ಪುನಸ್ಕಾರ ಅಂದ್ಕಂಡು ತಿಂತಿದ್ದ ಕೋಳಿ ಕೊಕ್ರನೆ ತಿನ್ನದೆ ಬಿಟ್ಟವ್ನೆ, ಅವ್ನತಾವ ಕೋಗಿ ಹಂದಿಬಾಡ ಇಕ್ಕೆಂಡು ಕೊಡಪ್ಪ ಅಂದ್ರೆ ಅದು ನಡಿಯಾ ಮಾತ ಎಂದು ತಾನೆ ತನ್ನ ಆಲೋಚನೆಗೆ ಬುದ್ಧಿ ಹೇಳಿಕೊಂಡ.

ಇಲ್ಲ, ನಾನು ಮಾಡ ಕರ್ತವ್ಯ ಎಲ್ಲ ಮಾಡಿದಿನಿ, ಆಗಿದ್ದು ಆಗೋತು ಈ ಅಪರೂಪದ ಮಾಂಸನ ಬಿಸಾಕದು ಬ್ಯಾಡ, ಅದು ಅಲ್ದೆ ಸತ್ತಿರದು ದೊಡವ್ವ, ದೊಡಪ್ಪೇನಾರ ಆಗಿದ್ರೆ ಅದು ರಕ್ತ ಸಂಬಂಧ ಅನಿಸ್ಕೆಣದು. ದೊಡವ್ವ ಹೊರ್ಗಿಂದ ಬಂದವ್ಳು ಎಂದು ಯಂಗೆಂಗೊ ತಿರುಗಿಸಿ ಲೆಕ್ಕ ಹಾಕತೊಡಗಿದ.

ಇಲ್ಲಿ ಮನೆಲಿ ಬೇಯ್ಸಿರೆ ನಾಕು ಜನುಕ್ಕೆ ಗೊತ್ತಾಗುತ್ತೆ, ದೊಡವ್ವುನ್ನ ಊಣದೇನಿದ್ರು ತೆಂಗಿನ ತೋಟ್ದಲ್ಲಿ. ಇನ್ನೊಂದು ಬಾರೆ ಹೊಲುತ್ತಕೆ ತಗಂಡೋಗಿ, ಅಲ್ಲಿ ಯಂಗಿದ್ರು ಗುಡುಸ್ಲು ಐತೆ ಅಲ್ಲೆ ಯಾಕೆ ಬೇಯಕಾಕ್ಬಾರ್ದು ಎಂದು ಆಲೋಚಿಸಿದ. ಅದರಂತೆ ಪ್ಲಾನ್ ಮಾಡಿ ಒಂದು ಹೊಲ್ಲಿಗೆ ಕಾರ ಉಪ್ಪು ಮಾಂಸನೆಲ್ಲ ಸುತ್ಕೆಂಡು ಹಿಂದ್ಗಡೆ ಬಾಗ್ಲಿಂದ ಸೈಕಲ್ ಹಾಕ್ಯಂಡು ಹೊಲ್ಟೇ ಬಿಟ್ಟ.